O.S. ನಂಬರಃ 02/2022

ಪಿ. ಡಬ್ಲ್ಯೂಃ 1

ದಿಃ 18-07-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಆರ್.ಎನ್. ವಕೀಲರಿಂದಃ

ನಮ್ಮ ಮನೆಯ ಪೂರ್ವದ ಕಡೆಗೆ ಕಲ್ಲಿನ ಪಾಗಾರ ಇದೆ ಎಂದರೆ ಸಾಕ್ಷಿ ಅದು ನನ್ನದೇ ಇರುತ್ತದೆ ಎಂದು ಹೇಳುತ್ತಾರೆ. ಕಲ್ಲಿನ ಪಾಗಾರದ ಆಚೆ ಗದ್ದೆ ಜಮೀನು ಇರುತ್ತವೆ ಎಂದರೆ ಸರಿ. ಸದರಿ ಗದ್ದೆ ಜಮೀನು 50-60 ಎಕರೆ ಇದೆ ಎಂದರೆ ಬೇರೆ ಬೇರೆ ಜನರದ್ದು ಇದೆ ಎಂದು ಹೇಳುತ್ತಾರೆ. ಆ ಜಮೀನುಗಳಲ್ಲಿ ಶೇಂಗಾ ಬೆಳೆಯುತ್ತಾರೆ ಎಂದರೆ ಭತ್ತ ಮಾತ್ರ ಬೆಳೆಯುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನುಗಳು ಸ್ವಲ್ಪ ಕೆಳಭಾಗದಲ್ಲಿದೆ ಎಂದರೆ ಸರಿ. ಸದರಿ ಜಮೀನುಗಳನ್ನು ಅಲ್ಲಲ್ಲಿ ಬದುಗಳನ್ನು ಮಾಡಿಕೊಂಡು ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ನನ್ನ ಜಮೀನಿನಿಂದ ಸದರಿ ಜಮೀನುಗಳ ಕಡೆಗೆ ಹೋಗಲು ಕಲ್ಲಿನ ದಣಪೆ ಇದೆ ಎಂದರೆ ಸರಿ. ನನ್ನ ಜಮೀನಿನ ದಕ್ಷಿಣಕ್ಕೆ ಹಾಗೂ ಉತ್ತರಕ್ಕೆ ಬೇರೆ ಬೇರೆ ಜನರ ವಾಸ್ತವ್ಯದ ಮನೆಗಳಿವೆ ಎಂದರೆ ಸರಿ. ನಮ್ಮ ಮನೆ ಹತ್ತಿರ ನಿಂತರೆ ಪ್ರತಿವಾದಿಯರ ಮನೆ ಕಾಣುತ್ತದೆ. ನಮ್ಮ ಮನೆಯ ಪಶ್ಚಿಮಕ್ಕೆ ಪ್ರತಿವಾದಿಯರ ಮನೆ ಇದೆ ಎಂದರೆ ಸರಿ. ಸದರಿ ಪ್ರತಿವಾದಿಯರ ಮನೆ 25-ಅಡಿ ದಕ್ಷಿಣೋತ್ತರ ಹಾಗೂ ಪೂರ್ವ ಪಶ್ಚಿಮವಾಗಿ 60- ಅಡಿ ಇದೆ ಎಂದರೆ ಅಳತೆ ಮಾಡಿಲ್ಲ ಎಂದು ಹೇಳುತ್ತಾರೆ. ಮನೆಯ ಎತ್ತರ ಅಂದಾಜು 30-ಅಡಿ ಇದೆ ಎಂದರೆ ಮಾಹಿತಿ ಇಲ್ಲ

ಎಂದು ಹೇಳುತ್ತಾರೆ. ಮೇಲ್ಛಾವಣಿ ಹಂಚಿನಿಂದ ಕೂಡಿದ್ದು, ಎರಡು ಪಕ್ಕೆಯ ಮನೆ ಇದೆ ಎಂದರೆ ಸರಿ. ಸದರಿ ಮನೆ ಐದು ಕೋಣೆಯುಳ್ಳದ್ದು ಎಂದರೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಮನೆ ದಕ್ಷಿಣಕ್ಕೆ ತಾಗಿ 2 ನೇ ಪ್ರತಿವಾದಿ ಮನೆ ಇದೆ ಎಂದರೆ ಸರಿ. ಸದರಿ ಮನೆಯೂ ಸಹ ಹಂಚಿನ ಛಾವಣಿಯಿಂದ ಕೂಡಿದೆ, ಆದರೆ ಮೇಲೆ ತಿಳಿಸಿದ ಉದ್ದ-ಅಗಲ, ಎತ್ತರ ಮತ್ತು ಕೋಣೆಗಳ ಬಗ್ಗೆ ಮಾಹಿತಿ ಇಲ್ಲ.

2 ನೇ ಪ್ರತಿವಾದಿ ಸರ್ಕಾರದ ಅನುದಾನದಲ್ಲಿ ಮನೆ ಕಟ್ಟಿಸಿದ್ದಾನೆ ಎಂದರೆ ಸರಿ, ಆದರೆ ಆ ಬಗ್ಗೆ ಯಾರಿಗೆ ತಿಳಿಸಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ವಾಸಿಸುವ ಮನೆ ಮೊದಲಿನಿಂದ ಇದ್ದು, 2 ನೇ ಪ್ರತಿವಾದಿ ವಾಸಿಸುವ ಮನೆಯನ್ನು ನಂತರ ನಿರ್ಮಿಸಲಾಗಿದೆ ಎಂದರೆ ಜೋರಾವರಿಯಿಂದ ನಿರ್ಮಿಸಿದ್ದಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ 5-6 ವರ್ಷದ ಹಿಂದೆ ಮನೆ ಕಟ್ಟಿಕೊಂಡಿದ್ದಾನೆ, ಆ ಸಮಯದಲ್ಲಿ ನನ್ನ ಒಬ್ಬನೇ ಮಗ ತೀರಿಕೊಂಡಿದ್ದರಿಂದ ನಾನು ದುಃಖದಲ್ಲಿದ್ದೆ. ಆ ನಂತರದ ದಿನಗಳಲ್ಲಿ ನಾನು ಕಡಮೆ ಪಂಚಾಯತಿ ಹಾಗೂ ಪೊಲೀಸ್ ಠಾಣೆಗೆ ಹೋಗಿದ್ದೆ, ಕಾಗದವನ್ನು ನನ್ನಂತೆ ಮಾಡಿಕೊಂಡು ಬಾ ಎಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಎಂಟು ವರ್ಷದ ಹಿಂದೆ ಪ್ರತಿವಾದಿಯರು ವಾಸಿಸುವ ಮನೆ ಕಡಮೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಇದ್ದವು ಎಂದರೆ ಸರಿ. ಇತ್ತಿತ್ತಲಾಗಿ ಹನೇಹಳ್ಳಿ ಗ್ರಾಮ ಪಂಚಾಯಿತಿಗೆ ಸದರಿ ವ್ಯಾಪ್ತಿಗಳು ಬದಲಾಗಿವೆ ಎಂದರೆ ಸರಿ.

1 ನೇ ಪ್ರತಿವಾದಿ ಮನೆ 1995-96 ನೇ ಸಾಲಿಗಿಂತ ಮೊದಲಿನದ್ದು ಎಂದರೆ ಇರಬಹುದು ಆದರೆ ನನಗೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮನೆ ಮೊದಲು ಕಡಮೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದ್ದು, ಮನೆ ನಂ.95 ಎಂದರೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಮನೆ ನಂಬರ ಕೂಡ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ವಾಸಿಸುವ ಮನೆಯ ಕಡಮೆ ಗ್ರಾಮ ಪಂಚಾಯತಿ ನಂಬರ 96 ಎಂದರೆ ಮನೆ ನಂಬರ ನೋಡಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಮನೆ ಮೊದಲು ಆತನ ತಂದೆ ದುರ್ಗಾ ವೆಂಕಟ ಗೌಡನ ಹೆಸರಿನಲ್ಲಿತ್ತು ಎಂದರೆ ನನಗೆ ಮಾಹಿತಿ ಇಲ್ಲ. 1995-96 ರ ಸಾಲಿನಲ್ಲಿಯೇ ಸದರಿ ಮನೆ ಹಂಚಿನ ಛಾವಣಿಯನ್ನು ತೋರಿಸಿದೆ ಎಂದರೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)

ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಆರ್.ಎನ್. ವಕೀಲರಿಂದಃ</u>

ಪ್ರತಿವಾದಿಯರಿಗೆ ಸಂಬಂಧಿಸಿದ ವಾಸ್ತವ್ಯದ ಮನೆಯ ಪೂರ್ವ ಭಾಗಕ್ಕೆ ಕಟ್ಟಡದ ಶೌಚಾಲಯ ಇದೆ ಎಂದರೆ ಸರಿ. ಸದರಿ ಕಟ್ಟಡ ಹಂಚಿನ ಎರಡು ಪಕ್ಕೆ ಛಾವಣಿ ಇದೆ ಎಂದರೆ ಸರಿಯಲ್ಲ. ಸದರಿ ಶೌಚಾಲಯದ ಪೂರ್ವದ ಕಡೆ ಹಂಚಿನ ಛಾವಣಿಯುಳ್ಳ

ದನದ ಕೊಟ್ಟಿಗೆ ಇದೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ತಂದೆ ಕಾಲದಿಂದಲೂ ದನಗಳ ಸಾಕಾಣಿಕೆ ಮಾಡುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೊದಲು ಬೇರೆ ಕಡೆ ಕೊಟ್ಟಿಗೆ ಇತ್ತು, ನಂತರ ಈ ಸ್ಥಳದಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ತಂದೆ ಕಾಲದಿಂದಲೂ ಸಹ ಒಂದೇ ಸ್ಥಳದಲ್ಲಿ ಇದೆ ಎಂದರೆ ಸರಿಯಲ್ಲ. ಅಂದಾಜು 5-6 ವರ್ಷಗಳಿಂದ ಸದರಿ ಕೊಟ್ಟಿಗೆ ಇದೆ. ಸದರಿ ಕೊಟ್ಟಿಗೆ ನಿರ್ಮಿಸುವ ಸಮಯದಲ್ಲಿ ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ಕೊಟ್ಟಿಗೆಯ ಪೂರ್ವಕ್ಕೆ ಪ್ರತಿವಾದಿಯರ ಬಾವಿ ಇದೆ ಎಂದರೆ ಸಾಕ್ಷಿ ಅದನ್ನು ನನ್ನ ತಂದೆ ಅವಧಿಯಲ್ಲಿ ತೆಗೆಯಲಾಗಿದೆ ಎಂದು ಹೇಳುತ್ತಾರೆ. ಸದರಿ ಬಾವಿಗೆ ಪ್ರತಿವಾದಿಯರು ಪಂಪಸೆಟ್ ಮೂಲಕ ನೀರು ಎತ್ತುತ್ತಾರೆ ಎಂದರೆ ಸರಿ. ಸದರಿ ಪಂಪ್‌ಸೆಟ್ ಮೂಲಕ ಮನೆಗೆ, ಗಿಡಮರ, ಕೊಟ್ಟಿಗೆ ಹಾಗೂ ಶೌಚಾಲಯಕ್ಕೆ ನೀರು ಬಳಸುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಯರ ವಾಸ್ತವ್ಯದ ಮನೆ ಕಡೆ ಅಂದಾಜು 40 ವರ್ಷಕ್ಕಿಂತಲೂ ಹೆಚ್ಚು ವರ್ಷದ ಅಡಿಕೆ ಮರ, ತೆಂಗಿನಮರ ಇರುತ್ತವೆ ಎಂದರೆ ಸಾಕ್ಷಿ, ಅವೆಲ್ಲ ನನ್ನ ಜಾಗೆಯಲ್ಲಿ ಇರುತ್ತವೆ ಎಂದು ಹೇಳುತ್ತಾರೆ. ಸದರಿ ತೆಂಗಿನ ಮತ್ತು ಅಡಿಕೆ ಮರಗಳ ಫಲವನ್ನು ಪ್ರತಿವಾದಿಯರೇ ಪಡೆಯುತ್ತಾರೆ ಎಂದರೆ ಸರಿ. ಈ ಮೊದಲು ನಾನು ಕೋರ್ಟನಲ್ಲಿ ಪ್ರತಿವಾದಿಯರು ವಾಸ್ತವ್ಯವಿದ್ದ ಆಸ್ತಿಯ ಕುರಿತು ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿಯರ ತಂದೆಯ ಕಾಲದಿಂದಲೂ ಕಟ್ಟಿಕೊಂಡ ಮನೆಯ ಬಗ್ಗೆ ತಕರಾರು ಮಾಡಿಲ್ಲ ಎಂದರೆ ಪಂಚಾಯಿತಿ ಹಾಗೂ ಪೊಲೀಸ್ ಠಾಣೆಗೆ ತಕರಾರು ಮಾಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಯರ ವಾಸ್ತವ್ಯವಿದ್ದ ಮನೆಗೆ ಕರ ನಾನು ತುಂಬಿಲ್ಲ ಎಂದರೆ ಸರಿ.

2 ನೇ ಪ್ರತಿವಾದಿ ಮನೆಗೆ ತಾಗಿ ಓಣಿ ಇದೆ ಎಂದರೆ ಸರಿ. ಸದರಿ ಓಣಿ ರಸ್ತೆ ಅಗಲವಾಗಬೇಕೆಂದು ನನ್ನ ಉದ್ದೇಶ ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ಜಾಗೆ ನನಗೆ ಕೊಡಬೇಕು ಎಂದು ಹೇಳುತ್ತಾರೆ. ಸದರಿ ರಸ್ತೆಗಾಗಿ 7 ಅಡಿ ಅಗಲ ಜಾಗೆ ಬಿಟ್ಟರೆ ನನಗೆ ಹೋಗಿ ಬರಲು ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಯರಿಗೆ ಮಕ್ಕಳಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ಮಕ್ಕಳು ಸದರಿ ವಾಸ್ತವ್ಯದ ಮನೆಯಲ್ಲಿಯೇ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಮಗಳು 27 ವರ್ಷದವಳಿರುತ್ತಾಳೆ ಎಂದರೆ ಮಾಹಿತಿ ಇಲ್ಲ. 2 ನೇ ಪ್ರತಿವಾದಿಯ ಮಗಳೂ ಸಹ ಅಲ್ಲಿಯೇ ಹುಟ್ಟಿ ಬೆಳೆದಿದ್ದು, ಅವಳು 26 ವರ್ಷ ವಯಸ್ಸಿನವಳು ಎಂದರೆ ಮಾಹಿತಿ ಇಲ್ಲ. ಪ್ರತಿವಾದಿಯರ ತಾಯಿ ಮದುವೆ ಆಗಿ ಬಂದ ದಿನದಿಂದಲೂ ಸದರಿ ಮನೆಯಲ್ಲಿಯೇ ವಾಸ್ತವ್ಯ ಇದ್ದಾಳೆ ಎಂದರೆ ಸರಿ, ಸಾಕ್ಷಿ ಆ ಸಮಯದಲ್ಲಿ ಅವರದ್ದು ಸಣ್ಣ ಮನೆ ಇತ್ತು ಎಂದು ಹೇಳುತ್ತಾರೆ. ಸದರಿ ಪ್ರತಿವಾದಿಯರು ತಮ್ಮ ಬಳಿ ಹಣ ಇದ್ದಾಗಲೆಲ್ಲ ಮನೆಯನ್ನು ವಾಡಾಯಿಸಿ, ಅಭಿವೃದ್ಧಿಪಡಿಸಿದ್ದಾರೆ ಎಂದರೆ ಸರಿ.

ನನ್ನ ಹಾಗೂ ಪ್ರತಿವಾದಿಯರ ಪೂರ್ವಜರು ಮೂಲವಾಗಿ ಒಂದೇ ಎಂದರೆ ಸರಿಯಲ್ಲ. ನಮಗೆ ಹಾಗೂ ಪ್ರತಿವಾದಿಯರ ನಡುವೆ ಅಂದಾಜು 20 ವರ್ಷಗಳಿಂದಲೂ ಮಾತು ಇಲ್ಲ. ನನ್ನ ವಾಸ್ತವ್ಯದ ಮನೆ ಹಾಗೂ ಬಾಗಾಯತ್ ಜಮೀನಿಗೆ ಕಲ್ಲಿನ ಪಾಗಾರ ಹಾಕಿದ್ದೇನೆ ಎಂದರೆ ಸರಿ. ಪ್ರತಿವಾದಿಯರ ಮನೆ ಹಾಗೂ ಜಮೀನಿನ ಸುತ್ತಲೂ ಪಾಗಾರ ಇದೆ ಎಂದರೆ ನಮ್ಮ ತಂದೆ ಹಾಕಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಹಾಗೂ ಪ್ರತಿವಾದಿಯರ ನಡುವೆ ಇರುವ ಪಾಗಾರ ತುಂಡು ಕಲ್ಲಿನ ತುಂಬಾ ಹಳೆಯ ಪಾಗಾರ

ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಗೆ ನನ್ನ ತಂದೆ ಪಾಗಾರ ಹಾಕಿದ್ದಾನೆ ಎಂದು ದಾಖಲೆ ಇದೆಯೇ ಎಂದರೆ ಸಾಕ್ಷಿ, ಸದರಿ ಜಮೀನು ಸಹ ನಮ್ಮದೇ ಎಂದು ಹೇಳುತ್ತಾರೆ. ಪ್ರತಿವಾದಿಯರ ವಾಸ್ತವ್ಯದ ಮನೆ ಹಾಗೂ ಜಮೀನು ಸುತ್ತಲೂ ಪ್ರತಿವಾದಿಯರ ತಂದೆ ಪಾಗಾರ ಹಾಕಿದ್ದಾನೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ಓಣಿಗೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಪಾಗಾರ ಅವರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.